ಆಯನೂರು, ತಾವರಗಟ್ಟಿ, ಖಾನಾಪುರ, ಎರೇಹಳ್ಳಿ, ನಂಜನಗೂಡು, ಮೈಸೂರು, ಚಾಮರಾಜನಗರ, ಹುಣಸೂರು, ಕಳ್ಳಬೆಟ್ಟ, ಕುಶಾಲನಗರ, ಪಂಡ್ಯ, ಕೀರ್ತಾನದಿ, ಬೈರಮಂಗಲ ಸೂಳ್ಯ, ಮಂಗಳೂರು ನೆಟ್ಟಾಣ, ಮಣ್ಣಾಗುಂಡಿ, ಪುತ್ತೂರು, ಸಂಗಮೇಶ್ವರಪೇಟೆ, ಒಟ್ಟಿಗೆ.
ಮೇಲ್ಕಂಡ ಡಿಪೋಗಳಿಂದ ಪ್ರಾರಂಭವಾದ ಕಟ್ಟಿಗೆ ಮತ್ತು ಅದರಿಂದ ಸರ್ಕಾರಕ್ಕೆ ಬಂದ ಆದಾಯದ ವಿವರ ಈ ಕೆಳಕಂಡಂತಿದೆ:—

ವರ್ಷ	ಬೆಂಬಿಮರ ಘನ ಮೀಟರ್	ಸಾಗುವಾನಿ ಘ.ಮೀ.	ಇತರೆ ಜಾತಿಯ ಮರ ಘ.ಮೀ.	ಸರ್ಕಾರಕ್ಕೆ ಬಂದ ಆದಾಯ ಲಕ್ಷ ರೂ.
೧೯೯೧–೯೨	೫,೯೪೫	೧೩,೫೮೭	೯೬,೬೮೪	೪೧೪೧.೪೨
೧೯೯೨–೯೩	೪.೨೨೮	೫,೬೦೫	೪೫.೨೭೩	೪೨೯೫.೮೭
೧೯೯೩–೯೪	೨,೦೭೪	೨,೭೨೫	೮೩,೧೪೮	೨೭೯೧.೦೧

(ನವೆಂಬರ್ ೯೩ರವರೆಗೆ)

ಉ) ರಾಜ್ಯದಲ್ಲಿ ಅರಣ್ಯ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಇವುಗಳಲ್ಲಿ ರಾಜ್ಯಯೋಜನೆ, ಕೇಂದ್ರ ಯೋಜನೆ, ಕೇಂದ್ರ ಪುರಸ್ಕೃತ ಯೋಜನೆಗಳು ಸೇರಿವೆ. ಅಲ್ಲದೆ ಜಿಲ್ಲಾ ಪರಿಷತ್‌ಗಳು ನಡೆಸುವ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ ಡಿ.ಪಿ.ಎ.ಪಿ. ಟಿ.ಆರ್.ವೈ. ಸಾಮಾಜಿಕ ಅರಣ್ಯ ಇತ್ಯಾದಿ ಕಾರ್ಯಕ್ರಮಗಳ ಅಡಿಯಲ್ಲಿ ಅರಣ್ಯ ವಿಭಾಗಗಳಿಗೆ ಅರಣ್ಯಾಭಿವೃದ್ಧಿಗಾಗಿ ಅನುದಾನ ನೀಡಲಾಗುತ್ತಿದೆ. ಹಲವು ಹೊಸ ಯೋಜನೆಗಳ ಅಡಿಯಲ್ಲಿ ಹೊಸ ನೆಡುತೋಪುಗಳನ್ನು ಬೆಳೆಸಲಾಗುತ್ತಿದೆ. ಕೆಲವು ಯೋಜನೆಗಳ ಅಡಿಯಲ್ಲಿ ಈಗಿರುವ ಅರಣ್ಯಗಳನ್ನು ಬೆಂಕಿ ಮತ್ತು ಜಾನುವಾರುಗಳಿಂದ ರಕ್ಷಿಸಲಾಗುತ್ತಿದೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯಿಂದ ಮೀನುಗಾರಿಕಾ ಅಭಿವೃದ್ಧಿ

೪೭೦(೭೮೨) ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ (ಸೇಡಂ).—ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ೧೯೯೧–೯೨, ೧೯೯೨–೯೩ ಸಾಲುಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳೇನು?

(ಆ) ಗುಲ್ಬರ್ಗಾ ಜಿಲ್ಲೆಯಲ್ಲಿ ಯೋಜನೆಗಳಿಗಾಗಿ ವಿರ್ಚು ಮಾಡಿರುವ ಹಣವೆಷ್ಟು?

(ಇ) ಆ ಯೋಜನೆಗಳಿಗಾಗಿ ೧೯೯೧–೯೨, ೧೯೯೨–೯೩ ಸಾಲುಗಳಲ್ಲಿ ವಿರ್ಚು ಮಾಡಿದ ಹಣ ವೆಷ್ಟು? (ತಾಲ್ಲೂಕುವಾರು ಹಾಗೂ ಗ್ರಾಮವಾರು ವಿವರಗಳನ್ನು ನೀಡುವುದು)

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು).—

(ಅ) ೧೯೯೧–೯೨, ೧೯೯೨–೯೩ ರ ಸಾಲಿನಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲು ಹಲವಾರು ಯೋಜನೆಗಳನ್ನು ಈ ಕೆಳಕಾಣಿಸಿದಂತೆ ಹಮ್ಮಿಕೊಳ್ಳಲಾಗಿದೆ :

೧) ಕಟ್ಟಡಗಳು.
೨) ಮೀನು ಕ್ಷೇತ್ರಗಳ ನಿರ್ಮಾಣ.
೩) ಮೀನುಮರಿ ಉತ್ಪಾದನೆ, ಸಾಕಣೆ ಮತ್ತು ಹಂಚಿಕೆ.
೪) ಮೀನುಗಾರಿಕೆ ಸಾಮಗ್ರಿಗಳಿಗಾಗಿ ಸಹಾಯಧನ.
೫) ಮೀನು ಕೊಳಗಳ ನಿರ್ಮಾಣಕ್ಕೆ ಸಹಾಯಧನ.
೬) ಮೀನುಮರಿ ಕ್ಷೇತ್ರಗಳ ವಿಸ್ತರಣೆ.

೭) ಖಾಸಗಿ ವಿಮಾನ ಕೊಳಗಳ ನಿರ್ಮಾಣಕ್ಕಾಗಿ ಸಹಾಯಧನ.

೮) ಜಲಾಶಯ ವಿಮಾನುಗಾರಿಕೆ ಅಭಿವೃದ್ಧಿ.

೯) ಸಾಂಪ್ರದಾಯಿಕ ವಿಮಾನುಗಾರಿಕೆ ಅಭಿವೃದ್ಧಿಗೆ ಸಹಾಯಧನ.

೧೦) ವಿಮಾನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳು.

೧೧) ಸಂಸ್ಕರಣೆ, ಸಂರಕ್ಷಣೆ ಮತ್ತು ಮಾರುಕಟ್ಟೆ.

೧೨) ವಿಮಾನುಗಾರರ ಸಹಕಾರಿ ಸಂಘಗಳಿಗೆ ಸಹಾಯಧನ.

೧೩) ಮತ್ಸ್ಯಲಯ ಸ್ಥಾಪನೆ.

೧೪) ಪ್ರದರ್ಶನ ಮತ್ತು ತರಬೇತಿ.

೧೫) ಕೇಂದ್ರ ಪುರಸ್ಕೃತ ವಿಮಾನುಗಾರರ ಕಲ್ಯಾಣ ಯೋಜನೆ ಇತ್ಯಾದಿ.

(ಆ) ಗುಲ್ಬರ್ಗಾ ಜಿಲ್ಲೆಯಲ್ಲಿ ಆ ಯೋಜನೆಗಳಿಗಾಗಿ ೧೯೯೧–೯೨ ರ ಸಾಲಿನಲ್ಲಿ ರೂ. ೭.೬೭೭ ಲಕ್ಷಗಳನ್ನು ಮತ್ತು ೧೯೯೨–೯೩ನೇ ಸಾಲಿನಲ್ಲಿ ರೂ. ೧೯.೩೯೭ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

(ಇ) ಆ ಯೋಜನೆಗಳಿಗಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ೧೯೯೧–೯೨, ೧೯೯೨–೯೩ ರ ಸಾಲಿಗೆ ಮಾಡಲಾದ ತಾಲ್ಲೂಕುವಾರು ವೆಚ್ಚದ ವಿವರಗಳು ಕೆಳಕಂಡಂತಿವೆ :

(ರೂ. ಲಕ್ಷಗಳಲ್ಲಿ)

ಕ್ರ ಸಂಖ್ಯೆ	ತಾಲ್ಲೂಕುಗಳ ಹೆಸರು	೧೯೯೧–೯೨	೧೯೯೨–೯೩
೧	ಚಿಂಚೋಳಿ	೦.೩೦೬	೦.೨೯೫
೨	ಚಿತ್ತಾಪುರ	೦.೩೨೬	೦.೧೭೫
೩	ಗುಲ್ಬರ್ಗಾ	೦.೮೨೬	೨.೩೮೫
೪	ಆಳಂದ	೦.೪೩೬	೦.೨೨೫
೫	ಆಫಜಲ್‌ಪುರ	೦.೧೭೬	೦.೦೭೫
೬	ಷಹಪುರ	೨.೬೦೩	೧೫.೨೭೮
೭	ಶೋರಾಪುರ	೦.೪೩೬	೦.೩೬೯
೮	ಜೇವರ್ಗಿ	೦.೦೭೬	೦.೦೭೫
೯	ಸೇಡಂ	೦.೧೨೬	೦.೦೭೫
೧೦	ಯಾದಗಿರಿ	೨.೩೬೬	೦.೪೪೫
	ಒಟ್ಟು	೭.೬೭೭	೧೯.೩೯೭

ಕ್ಷೀರ ಯೋಜನೆಯಡಿಯಲ್ಲಿ ಶಾಲೆಗಳಿಗೆ ಹಾಲು ಪೂರೈಕೆ—ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಣ ಬಿಡುಗಡೆ

೪೭೭(೭೪೯) ಶ್ರೀ ಗುರುಪಾದಪ್ಪ ನಗಮಾರಪಲ್ಲಿ (ಔರಾದ್). — ಪಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಕ್ಷೀರಾ ಯೋಜನೆಯಡಿಯಲ್ಲಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಹಾಲು ಪೂರೈಕೆ ಮಾಡುತ್ತಿರುವುದು ನಿಜವೇ?

(ಆ) ಈ ಹಾಲನ್ನು ಕಾಯಿಸಿ ಸಕ್ಕರೆ ಬೆರೆಸಿ ಸಂಬಂಧಪಟ್ಟ ಸ್ಥಳಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು ಶಾಲೆಗೆ ಸರಬರಾಜು ಮಾಡುತ್ತಿರುವುದು ನಿಜವೇ?

(ಇ) ಸರಬರಾಜು ಮಾಡಿದ ಹಾಲು ಮತ್ತು ಅದಕ್ಕೆ ತಗಲುವ ವೆಚ್ಚವನ್ನು ಬಿಡುಗಡೆ ಮಾಡುವಲ್ಲಿ ಸರ್ಕಾರ ವಿಳಂಬ ಮಾಡುತ್ತಿರುವುದು ನಿಜವೇ?